ದಿನಾಂಕ 19-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. ಎಸ್.ಎಂ.ಆರ್. ವಕೀಲರಿಂದ</u>

ನಾನು ಎಸ್.ಎಸ್.ಎಲ್.ಸಿ. ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಮಾತ್ರ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ವಾದ ಪತ್ರದಲ್ಲಿರುವ ಅಂಶಗಳನ್ನು ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಹಾಕಿದ್ದು ಇರುತ್ತದೆ. ದಾವಾ ಹೂಡಲು ನಮ್ಮ ವಕೀಲರಿಗೆ ಮಾಹಿತಿಯನ್ನು ನನ್ನ ತಾಯಿ ನನಗೆ ತಿಳಿಸಿದ್ದು ಅದನ್ನು ನಾನು ವಕೀಲರಿಗೆ ತಿಳಿಸಿರುತ್ತೇನೆ. ಈ ದಾವೆಯಲ್ಲಿ ನನ್ನ ತಾಯಿಯಾದ ಫಾತೀಮಾ ಈಕೆಯು ಪಕ್ಷಗಾರಳಾಗಿ ಇರುವುದಿಲ್ಲ. ನನ್ನ ತಾಯಿಯೂ ನಮ್ಮ ವಾರಸುದಾರಳಿರುತ್ತಾಳೆ ಎಂದರೆ ಸರಿ. ನನ್ನ ತಾಯಿಯು ನಮ್ಮ ಜೊತೆಯಲ್ಲಿರುವ ಕಾರಣ ಮತ್ತು ಆಕೆಗೆ ಓಡಾಡಲು ಆಗದೇ ಇರುವ ಕಾರಣ ಆಕೆಯನ್ನು ಈ ದಾವೆಯಲ್ಲಿ ಪಕ್ಷಗಾರಳಾಗಿ ಮಾಡಿಲ್ಲ. ನನ್ನ ತಾಯಿ ನಮ್ಮ ಪರವಾಗಿ ಯಾವುದೇ ಅಧಿಕಾರ ಪತ್ರವನ್ನು ಬರೆದುಕೊಟ್ಟಿಲ್ಲ. ನನ್ನ ತಂದೆಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣುಮಕ್ಕಳು ವಾರಸುದಾರರಿರುತ್ತೇವೆ. ಮತ್ತು ನನ್ನ ತಾಯಿಯೂ ಸಹ ವಾರಸುದಾರಳು ಇರುತ್ತಾಳೆ. ಕಾನೂನು ಅಡಿಯಲ್ಲಿ ಒಬ್ಬ ವ್ಯಕ್ತಿ ತೀರಿಕೊಂಡ ನಂತರ ಆತನ ಎಲ್ಲಾ ವಾರಸುದಾರರು ದಾವೆಯನ್ನು ಹಾಕಬೇಕಾಗುತ್ತದೆ ಎಂದರೆ ಸಾಕ್ಷಿಯು ನಮ್ಮ ತಾಯಿ ನಮ್ಮ ಜೊತೆ ಇರುವ ಕಾರಣ ನಾವುಗಳು ಮಾತ್ರ ದಾವೆಯನ್ನು ಹೂಡಿರುತ್ತೇವೆ. ಆಕೆಯನ್ನು ಈ ದಾವೆಯಲ್ಲಿ ಸೇರಿಸದೇ ಇರುವ ಕಾರಣ ಈ ದಾವೆ ಕಾನೂನು ಅಡಿಯಲ್ಲ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

ನಾನು ಈ ಪ್ರಸ್ತುತ ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ. ಸುಮಾರು 25 ವರ್ಷಗಳಿಂದ ನಾನು ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಈಗ 8 ವರ್ಷಗಳಿಂದ

ನಾನು ಬೆಂಗಳೂರಿನಲ್ಲಿ ವಾಸ ಮಾಡುತ್ತಿದ್ದೇನೆ ಎಂದು ನುಡಿಯುತ್ತಾರೆ. 1 ನೇ ವಾದಿಯು ಈಗ 3 ರಿಂದ 4 ವರ್ಷಗಳ ಹಿಂದೆ ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಿದ್ದ ಎಂದರೆ ಸರಿಯಲ್ಲ. 2 ನೇ ವಾದಿಗೆ 2017 ನೇ ಸಾಲಿನಲ್ಲಿ ಮದುವೆ ಮಾಡಿರುತ್ತೇವೆ. 2017 ನೇ ಸಾಲಿನಿಂದ 2 ನೇ ವಾದಿ ಮುದುಗಲ್ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. 3 ನೇ ವಾದಿಯು ಸುಮಾರು 20 ರಿಂದ 25 ವರ್ಷಗಳಿಂದ ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಆತನು ಈಗ ಸುಮಾರು 7 ವರ್ಷಗಳಿಂದ ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಿದ್ದಾನೆ. ನಾನು, 1 ನೇ ವಾದಿ ಮತ್ತು 3 ನೇ ವಾದಿ ಹೋಟೇಲ್‌ನಲ್ಲಿ ಕೆಲಸ ಮಾಡುತ್ತಿದ್ದೇವೆ ಎಂದರೆ ಸರಿ. 5 ನೇ ವಾದಿಗೆ ಮದುವೆಯಾಗಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಆಕೆ ಬುದ್ಧಿಮಾಂಧಳು ಇರುತ್ತಾಳೆ ಎಂದು ನುಡಿಯುತ್ತಾರೆ. ಆಕೆಯ ಪರವಾಗಿ ದಾವಾ ನಡೆಸಿಕೊಂಡು ಹೋಗಲು ನಾನು ಅರ್ಜಿಯನ್ನು ಹೂಡಿರುತ್ತೇನೆ. ಅದೇರೀತಿ ನಾನು 5 ನೇ ವಾದಿ ಪರ ಸಹಿ ಮಾಡಿರುತ್ತೇನೆ. ಈ ಸಂದರ್ಭದಲ್ಲಿ ಸಾಕ್ಷಿಯು 5 ನೇ ವಾದಿಯು ಹುಟ್ಟಿದಾಗಿನಿಂದಲೂ ಇಲ್ಲಿಯತನಕ ಬುದ್ಧಿಮಾಂಧಳಿರುತ್ತಾಳೆ.

ಈ ಸಂದರ್ಭದಲ್ಲಿ ವಾದಿ ಪರ ವಕೀಲರು ಆಕೆಯನ್ನು ಪ್ರತಿನಿಧಿಸುವ ಕುರಿತು ಅರ್ಜಿ ಹಾಕುವುದಿದೆ ಎಂದು ವಾದಿಸಿ ಸಾಕ್ಷಿದಾರರ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ, ನೀಡಲಾಯಿತು.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ. ಹೇ. ಕೇ. ಸರಿ ಇದೆ,

2 ನೇ ಅಪರ ಸಿಜೆ & ಜೆಎಂಎಫ್‌ಸಿ, ನ್ಯಾಯಾಲಯ, ಸಿಂಧನೂರು.